ಶ್ರೀಮತಿ ಇ. ಇ. ವಾಜ್. —ಈಗ ಚಿಕ್ಕಮಗಳೂರು ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಒಂದೆರಡು ತಾರಿ ನಾನು ಬಾಯಿ ಮಾತಿನಿಂದ ವಾರ್ನಿಂಗ್ ಕೊಟ್ಟಿದ್ದೂ ಇದೆ. ನಾವು ಸರಿಯಾಗಿ ವಿತರಣೆ ಮಾಡುವುದಾದರೆ ವಹಿಸಿಕೊಳ್ಳಬೇಕು ಎಂದು ಹೇಳಿದರೂ ಅವರು ಸರಿಯಾಗಿ ವಿತರಣೆ ಮಾಡಲಿಲ್ಲ, ೨೯-೩೦-೧೯೬೦ ತಾರೀಖು ಪದಾರ್ಥಗಳನ್ನು ಲಿಫ್ಟ್ ಮಾಡುವುದಕ್ಕೆ ಪ್ರಯತ್ನ ಮಾಡಿದರು. ಅದನ್ನು ಅವರು ಯಾವಾಗ ಹೇಳುವುದಕ್ಕೆ ಸಾಧ್ಯವಾಗುತ್ತದೆ, ಆದರಿಂದ ಜನರಿಗೆ ತೊಂದರೆಯಾಯಿತು, ಆಗ ವಾರ್ನಿಂಗ್ ಕೊಟ್ಟಿದ್ದು ಇದೆ.

ಶ್ರೀ ಎಂ. ಮಲ್ಲಪ್ಪ. —ಈಗ ಕೆಲವು ಖಾಸಗಿಯವರಿಗೆ ವಹಿಸಿಕೊಟ್ಟಿರುವುದರಿಂದ, ಅವರು ಷುಗರ್ ಮಾತ್ರ ಮಾರಾಟ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇನ್ನು ನ್ಯೂ ಸ್ಟೋರ್ಸ್, ಚಿಕ್ಕಮಗಳೂರು ಅಲ್ಲಿ ೨೫೫ ಟನ್ಸ್ ಕೊಡುತ್ತಿದ್ದಾರೆ. ಈ ರೀತಿ ಕೊಟ್ಟು ಸರಿಯಾದ ರೀತಿಯಲ್ಲಿ ಸರಬರಾಜು ಆಗದೇ ಇದ್ದರೆ, ಆದರೆ ಮೇಲೆ ಹತೋಟಿ ಇಡುವುದಕ್ಕೆ ಯಾವರೀತಿ ಸರ್ಕಾರದ ಪಾಲಿಸಿ ಇದೆ ? ಅಲ್ಲದೇ ಅವರು ಸರಿಯಾದ ರೀತಿಯಲ್ಲಿ ಸರಬರಾಜು ಮಾಡದೇ ಇದ್ದರೆ, ತಾವು ಡಿಪ್ಟಿಕ್ಟ್ ಸ್ಟೋರ್ಸ್‌ಗೆ ವಹಿಸಿ ಕೊಟ್ಟು ಸಮರ್ಪಕವಾದ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಂತ್ತೀರಾ ?

ಶ್ರೀಮತಿ ಇ. ಇ. ವಾಜ್.—ತಾವು ನ್ಯೂ ಸ್ಟೋರ್ಸ್, ಚಿಕ್ಕಮಗಳೂರು ವಿಷಯ ಮಾತನಾಡಿದಿರಿ, ನಾನು ಸಹ ಅದನ್ನು ನೋಡಿದ್ದೇನೆ. ಅವರು ಸಕ್ಕರೆ ಒಂದನ್ನೇ ಲಿಫ್ಟ್ ಮಾಡುವುದಿಲ್ಲ ಎಲ್ಲಾ ಸಾಮಗ್ರಿ ಗಳನ್ನು ಲಿಫ್ಟ್ ಮಾಡುತ್ತಾರೆ, ಇನ್ನು ಏನಾದರು ಲೋಪದೋಷಗಳು ಹಡೆಯುವುದು ಇದ್ದರೆ ಖಂಡಿತ ಅವರ ವರಿ ತರಿಸಿಕೊಂಡು ಏನು ಕ್ರಮ ತೆಗೆದುಕೊಳ್ಳಬೇಕು ಹಾಗೆ ತೆಗೆದುಕೊಳ್ಳುತ್ತೇನೆ.

ಹಾಸನ ತಾಲೂಕಿನಲ್ಲಿ ರೇಷ್ಮೆ ವ್ಯವಸಾಯ

548. ಶ್ರೀ ಕೆ. ಎಚ್ ಹನುಮೇಗೌಡ (ಹಾಸನ).—ರೇಷ್ಮೆ ವ್ಯವಸಾಯ ರಾಜ್ಯ ಮಂತ್ರಿ ಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೇ:—

(ಅ) ಹಾಸನ ತಾಲ್ಲೂಕಿನಲ್ಲಿ ರೇಷ್ಮೆ ಬೆಳೆಗೆ ಸೂಕ್ತ ವಾತಾವರಣವಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ ಈ ತಾಲ್ಲೂಕಿನಲ್ಲಿ ರೇಷ್ಮೆ ಬೆಳೆಯನ್ನು ಪ್ರಚಾರ ಮಾಡಲು ಮತ್ತು ಬೆಳೆಸಲು ಸರ್ಕಾರ ಯಾವ ಕಾರ್ಯಕ್ರಮ ತೆಗೆದುಕೊಳ್ಳಲುದ್ದೇಶಿಸಿದೆ ?

ಶ್ರೀ ಎ. ಎಸ್. ಕೌಜಲಗಿ(ರೇಷ್ಮೆ ವ್ಯವಸಾಯ ರಾಜ್ಯ ಮಂತ್ರಿಗಳು).—

(ಅ) ಬಂದಿದೆ.

(ಆ) ಕೈಕೊಂಡಿರುವ ಕಾರ್ಯಕ್ರಮಗಳು.

(1) ರೇಷ್ಮೆ ವ್ಯವಸಾಯದಲ್ಲಿ ಆಸಕ್ತಿ ಇರುವ ರೈತರಿಗೆ ಒಂದು ತಿಂಗಳ ಅವಧಿಯ ತರಬೇತಿ ಯನ್ನು ಯಾವುದಾದರೂ ಸರ್ಕಾರೀ ಹಿಪ್ಪನೇರಳೆ ಕೇಂದ್ರಗಳಲ್ಲಿ ಕೊಡಲಾಗುವುದು.

(2) ಸರ್ಕಾರೀ ಫಾರಂಗಳಲ್ಲಿ ಸಿಗುವಷ್ಟು ಹಿಪ್ಪನೇರಳೆ ಕಡಿಗಳನ್ನು ಸರಬರಾಜು ಮಾಡುವುದು

(3) ಹಿಪ್ಪನೇರಳೆ ವ್ಯವಸಾಯ ಹಾಗೂ ರೇಷ್ಮೆಹುಳು ಸಾಕಾಣಿಕೆ ಬಗೆಗೆ ತಾಂತ್ರಿಕ ಸಲಹೆ ನೀಡಲು ಇಲಾಖೆಯ ತಾಂತ್ರಿಕ ಸಿಬ್ಬಂದಿಯ ಸಹಾಯ ಒದಗಿಸಲಾಗುವುದು.

ಶ್ರೀ ಅನಿವಾಳದ ನಂಜಪ್ಪ.—ಸ್ವಾಮಿ, ರೇಷ್ಮೆ ಬೆಳೆಗೆ ಹಾಸನ ತಾಲೂಕಿನಲ್ಲಿ ಒಳ್ಳೆಯ ವಾತಾವರಣ ಇದೆ ಎಂದು ಹವಾ ಚೆನ್ನಾಗಿ ಇದೆ ಎಂದು ತಾವೇ ಒಪ್ಪಿಕೊಂಡಿದ್ದೀರಿ. ಇದರ ಬಗ್ಗೆ ಪ್ರಚಾರ ಮಾಡುವುದಕ್ಕೆ, ಅಲ್ಲಿ ರೈತರಿಗೆ ಪ್ರಚಾರ ಕೇಂದ್ರಗಳನ್ನು ತೆರೆಯುವುದು, ಅಲ್ಲದೇ ಅವರಿಗೆ ಒಂದು ಉತ್ಸಾಹ ಬರುವ ಹಾಗೆ ಪ್ರತಿ ಹೋಬಳಿಯಲ್ಲೂ ಎರಡು ಪ್ರಚಾರ ಕೇಂದ್ರಗಳನ್ನು ತೆರೆಯುವುದು ಸೂಕ್ತವಲ್ಲವೇ ?

† ಶ್ರೀ ವಿ. ಎಸ್. ಕೌಜಲಗಿ.—ನಮ್ಮ ಇಲಾಖೆಯಲ್ಲಿ ಯಾವುದು ಪ್ರಚಾರ ಕೇಂದ್ರಗಳನ್ನು ತೆಗೆದಿಲ್ಲ. ರೇಷ್ಮೆ ಫಾರಂಗಳನ್ನು ತೆಗೆದಿದ್ದೇವೆ.

ಶ್ರೀ ಅನಿವಾಳದ ನಂಜಪ್ಪ.—ಸ್ವಾಮಿ, ಈ ಬೆಳೆಯನ್ನು ಹೊಸದಾಗಿ ಪ್ರಾರಂಭ ಮಾಡ ಬೇಕಾಗಿರುವುದರಿಂದ ರೈತರಿಗೆ ಉತ್ಸಾಹ ಮತ್ತು ಪ್ರೋತ್ಸಾಹ ದೊರೆಯುವ ಉದ್ದೇಶದಿಂದ ಬಾಪಿ ಮತ್ತು ಪಿಷನರಿ ಇವುಗಳಿಗೆ ನಬ್ಸಿಡಿ ರೂಪದಲ್ಲಿ ಕೊಟ್ಟು ಪ್ರೋತ್ಸಾಹಿಸುವುದು ಸೂಕ್ತವಲ್ಲವೇ ?

ಶ್ರೀ ವಿ ಎಸ್. ಕೌಜಲಗಿ —ಈಗ ಕ್ಯಾಷ್ ಪ್ರೋಗ್ರಾಂ ಸ್ಕೀಮಿನಲ್ಲಿ ಅದರಂತೆ ಮಾಡುತ್ತಿದ್ದೇವೆ. ಹಾಸನ ಜಿಲ್ಲೆಯಲ್ಲಿ ನಾಲ್ಕೂ ತಾಲ್ಲೂಕುಗಳಲ್ಲಿ ಮಾತ್ರ ರೇಷ್ಮೆ ವ್ಯವಸಾಯ ಮಾಡುವು ದಕ್ಕೆ ಅನುಕೂಲವಾಗತಕ್ಕ ಭೂಮಿ ವಾತಾವರಣ ಇದೆ.

ಶ್ರೀ ಅನಿವಾಳದ ನಂಜಪ್ಪ.—ಸ್ವಾಮಿ, ಬೆಂಗಳೂರು ವಿಶ್ವವಿದ್ಯಾನಿಲಯದವರು ಒಂದೆರಡು, ಪ್ರಚಾರ ಕೇಂದ್ರಗಳನ್ನು ತೆರೆದು ಈ ಬಗ್ಗೆ ತಿಳುವಳಿಕೆ ಕೊಟ್ಟಮೇಲೆ ಅನೇಕ ಕಡೆ ರೈತರು ಮುಂದೆ ಬಂದಿದ್ದಾರೆ; ಉತ್ತಮವಾದ ಬೆಳೆ ತೆಗೆಯುವುದಕ್ಕೆ ಪ್ರಾರಂಭ ಮಾಡಿದ ಮೇಲೆ ಅದನ್ನು ಕೊಳ್ಳುವುದಕ್ಕೆ ಒಂದು ರೆಗ್ಯೂಲೇಟೆಡ್ ಮಾರ್ಕೆಟ್ ತೆರೆಯುವುದು ಸೂಕ್ತವಲ್ಲವೇ ?

ಶ್ರೀ ವಿ. ಎಸ್. ಕೌಜಲಗಿ.— ಬೆಳೆಯೇ ಇಲ್ಲದೆ, ಮಾರ್ಕೆಟ್ ತೆಗೆಯುವುದಕ್ಕೆ ಸಾಧ್ಯವಿಲ್ಲ ಜನ ಹೆಚ್ಚಿಗೆ ಮುಂದೆ ಬಂದು ರೇಷ್ಮೆ ಬೆಳೆಯನ್ನು ಹೆಚ್ಚಿಗೆ ಬೆಳೆದ ನಂತರ ಮಾರುಕಟ್ಟೆ ಅನುಕೂಲ ಮಾಡಿಕೊಡೋಣ.

ಶ್ರೀ ಟಿ. ಎಂ. ಮಂಜುನಾಥ್.—ರೇಷ್ಮೆ ವ್ಯವಸಾಯ ತ್ವರಿತಗತಿಯಲ್ಲಿ ಆಗಬೇಕಾದರೆ, ಗ್ರಾಮ ಸೇವಕರುಗಳಿಗೆ ತರಬೇತಿ ಕೊಟ್ಟು ಪ್ರಚಾರ ಮಾಡುವುದು ಸೂಕ್ತ ಅಲ್ಲವೇ ?

ಶ್ರೀ ವಿ. ಎಸ್. ಕೌಜಲಗಿ —ಗ್ರಾಮಸೇವಕರಿಗೆ ಕೊಡುವ ಬದಲು ಸ್ವತಃ ವ್ಯವಸಾಯಗಾರ ರಿಗೆ ತರಬೇತು ಕೊಡುತ್ತಿದ್ದೇವೆ ; ಆದರೂ ಸಾಕಷ್ಟು ಜನ ಮುಂದೆ ಬರುತ್ತಾ ಇಲ್ಲ ! ನಮಾರು 6 ವಾರಗಳ ಕಾಲ ಪ್ರಚಾರ ಮಾಡುತ್ತಿದ್ದೇವೆ.

ಶ್ರೀ ಅನಿವಾಳದ ನಂಜಪ್ಪ.—ಸ್ವಾಮಿ, ಹಾಸನ ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ ರೇಷ್ಮೆ ಬೆಳೆಯುತಕ್ಕ ವಾತಾವರಣ ಇದೆ ಎಂದು ಹೇಳಿದಿರಿ ; ಅರಸೀಕೆರೆಯಲ್ಲಿ ತೆಂಗಿನ ನಾರಿನ ಸಂಶೋಧನಾ ಕೇಂದ್ರವನ್ನು ಮಾಡಿದ್ದೀರಿ ; ಅದೇ ರೀತಿ ರೇಷ್ಮೆ ಬೆಳೆ ಸಂಶೋಧನಾ ಕೇಂದ್ರವನ್ನು ಪ್ರಾರಂಭ ಮಾಡಿ ರೈತರು ಮುಂದೆ ಬರುವುದಕ್ಕೆ ಏರ್ಪಾಡು ಮಾಡಿ ಆ ಮೂಲಕ ಪ್ರಚಾರ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವಿ. ಎಸ್. ಕೌಜಲಗಿ.—ತಮ್ಮ ಸಲಹೆಯನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಟಿ. ಎಂ. ಮಂಜುನಾಥ್.—ಈ ವಿಷಯದಲ್ಲಿ ರೈತರಿಗೆ ಹೆಚ್ಚು ಉತ್ಸಾಹ ಬರಬೇಕಾದರೆ ವ್ಯವಸಾಯ ಇಲಾಖೆಯಲ್ಲಿ ಅಧಿಕಾರಿಗಳು ಇರುತ್ತಾರೆ ; ಗ್ರಾಮಸೇವಕರುಗಳು ಇರುತ್ತಾರೆ ; ನೂಕ್ತವಾದ ಹವಾಮಾನ ಮತ್ತು ನೀರು ಎಲ್ಲಿ ಸಿಗುತ್ತದೆ ; ಅಲ್ಲಿ ಬೆಳೆಯುವುದಕ್ಕೆ ಜನಗಳಿಗೆ ತಿಳು ವಳಿಕೆ ಕೊಟ್ಟು ಪ್ರಚಾರ ಮಾಡುವುದು ಸೂಕ್ತವಲ್ಲವೇ ?

ಶ್ರೀ ವಿ. ಎಸ್. ಕೌಜಲಗಿ.—ತಮ್ಮ ಸಲಹೆಯನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

Land Compensation in respect of Gulbarga-Chowdapur and other P.W.D. Roads.

559. SRI D. B KALMANKAR (Afzalpur).— Will the Minister for Public Works be pleased to state :—

(*a*) whether roads are laid from Gulbarga to Chowdapur *via* Gobbur (30 KM), Chowdapur to Chimmalla (22 KM), Afzalpur to Ghattarga (15 KM), Afzalpur to Mannur (30 KM), Afzalpur to Balurgi